ತಾತ್ತ್ವಿಕತೆಯ ತಿರುಳಾಗಿತ್ತು. ಅದರಲ್ಲೂ ಇಂದಿನ ಮುಂದಿನ ಭಾರತದ ಬದುಕಿಗೆ ಗಾಂಧಿ-ಅಂಬೇಡ್ಕರ್ ಇಬ್ಬರೂ ಅನಿವಾರ್ಯ ಮತ್ತು ಅಗತ್ಯವಾಗಬೇಕು.

**◆ ಬಹುತ್ವದ ಬಗೆಗಿನ ತಮ್ಮ ಅಭಿಪ್ರಾಯ?**

ಬಹುತ್ವವೆನ್ನುವುದು ಈ ನೆಲದ ಬಹುಮುಖ್ಯ ಲಕ್ಷಣವೂ ಹೌದು, ಬಂಡವಾಳವೂ ಹೌದು. ಈ ಮಣ್ಣಿನ ಸಾಂಸ್ಕೃತಿಕ ಕ್ರಿಯಾಶೀಲತೆಯ ಸಾಕ್ಷಿಯೂ ಹೌದು. ಆದರೆ, ವರ್ತಮಾನದ ಸಾಮ್ರಾಜ್ಯಶಾಹಿ ಧೋರಣೆಯುಳ್ಳ ಅಧಿಕಾರದಲ್ಲಿರುವ ಯಾಜಮಾನ್ಯವು ಇದರ ಮಹತ್ವವನ್ನು ಅರಿಯುವಲ್ಲಿ ವಿಫಲವಾಗಿದೆಯೆನ್ನಿಸುತ್ತಿದೆ. ಅದರ ಏಕತೆ ಎನ್ನುವ ಮಂತ್ರ ಬಹುತ್ವಕ್ಕೆ ಭಾರೀ ಪೆಟ್ಟನ್ನು ನೀಡುತ್ತಿದೆ. ಬಹುತ್ವಕ್ಕೆ ಪೆಟ್ಟು ಬಿದ್ದರೆ ಖಂಡಿತವಾಗಿಯೂ ಅದು ಈ ನಾಡಿನ ಸಾಂಸ್ಕೃತಿಕ ಸೌಂದರ್ಯವನ್ನು ಸರ್ವನಾಶಗೊಳಿಸುತ್ತದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಚರಿತ್ರೆಯ ಏಕಮುಖ ಸಾಕ್ಷಿಗಳ ಮುಖೇನ ಈ ನೆಲದ ಚರಿತ್ರೆಯನ್ನು ಏಕಾಕೃತಿಗೆ ತರಬಲ್ಲೆವು ಎನ್ನುವುದು ಕೇವಲ ಭ್ರಮೆಯಷ್ಟೇ. ಏಕೆಂದರೆ, ಈ ನೆಲದ ಬದುಕು ಅಸಂಖ್ಯಾತ ಬಹುತ್ವಗಳ ಸಂಗಮ. ಅದುವೇ ಈ ನೆಲದ ಬದುಕಿನ ಸೊಬಗಿಗೆ ನಿದರ್ಶನ.

**◆ ನಿಮ್ಮ ಬರಹದ ಮೇಲೆ ಪ್ರಭಾವ ಬೀರಿದ ಲೇಖಕರುಗಳು ಯಾರು ಮತ್ತು ಏಕೆ?**

ನಾನು ಮೊದಲು ಓದಿದ್ದು ಕಕ್ಕಯ್ಯ ಪೋಳ ಅವರ 'ಮೂಕನಾಯಕ' ಕೃತಿ. ಅದು ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ಪುಸ್ತಕ. ಅದರ ನಂತರ ಅಂಬೇಡ್ಕರ್ ಅವರನ್ನು ಹೆಚ್ಚು ಓದಿದೆ. ಬಾಬಾಸಾಹೇಬರ ಪ್ರಭಾವದ ಜೊತೆಗೆ ದಲಿತ ಬಂಡಾಯದ ದೇವನೂರರು, ಸಿದ್ಧಲಿಂಗಯ್ಯ, ಚೆನ್ನಣ್ಣ ವಾಲೀಕಾರ, ಮಲ್ಲೇಪುರಂ – ಇವರೆಲ್ಲರೊಂದಿಗೆ ಒಡನಾಡಿದ್ದೇನೆ, ಇವರಿಂದ ಹೆಚ್ಚಿನದನ್ನು ಕಲಿತಿದ್ದೇನೆ.

**◆ ಸಂವಿಧಾನದ ಕುರಿತು ಇಂದು ಹೆಚ್ಚು ಚರ್ಚೆ ನಡೆಯುತ್ತಿದೆ. ತಳಸಮುದಾಯದ ವಿದ್ಯಾವಂತರು ಈ ಕುರಿತು ಹೇಗೆ ಯೋಚಿಸಬೇಕು?**

ಸಂವಿಧಾನವೆನ್ನುವುದು ಈ ದೇಶದ ಆತ್ಮಸಾಕ್ಷಿಯ ಆತ್ಮಕಥನ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅಂವಿಕಲರಾದವರಿಗೆ ಅದೊಂದು ಊರುಗೋಲು. ಆ ಊರುಗೋಲೇ ಇಂದು ಅನೇಕ ಅಸಹಾಯಕ ಸಮುದಾಯಗಳು ಸ್ವಂತ ಶಕ್ತಿಯ ಮೇಲೆ ತಮ್ಮ ನೆಲೆಯನ್ನು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಆದರೆ ಇಂದು ಓಟ್ ಬ್ಯಾಂಕ್ ಕಾರಣಕ್ಕಾಗಿ ಸಂವಿಧಾನ ಕುರಿತಾದ ಚರ್ಚೆ ಹೆಚ್ಚು ಮುನ್ನೆಲೆಗೆ ಬರುತ್ತಿದೆ. ಅಂಬೇಡ್ಕರ್ ಅವರು ಪರಂಪರಾಗತವಾದ ನಂಬಿಕೆಗಳ ಆಧಾರದ ಮೇಲಿನ ಸಾಮಾಜಿಕ ವ್ಯವಸ್ಥೆಯ ಪೂರ್ವಗ್ರಹಗಳನ್ನು ಭಗ್ನಗೊಳಿಸಿ, ನವಭಾರತದ ಕಟ್ಟುವಿಕೆಯ ಭಾಗವಾಗಿ ಸಂವಿಧಾನವನ್ನು ರಚಿಸಿದರು. ಈಗ ಮತ್ತೆ ಅದರ ಬದಲಾವಣೆಯ ಬಗ್ಗೆ ಮಾತಾನಾಡಿದರೆ ನಾವು ಮುನ್ನಡೆದಂತಲ್ಲ. ಅದು ನಮ್ಮ ಹಿನ್ನಡೆಗೆ ಸಾಕ್ಷಿ. ಹೀಗಾಗಿ ಆ ರೀತಿ ಸಂಭವಿಸುವುದಕ್ಕೆ ಬಿಡಬಾರದು. ಕೇವಲ ತಳಸಮುದಾಯದವರಷ್ಟೇ ಅಲ್ಲ, ಆತ್ಮಸಾಕ್ಷಿಯುಳ್ಳ ಈ ದೇಶದ ಪ್ರತಿಯೊಬ್ಬರೂ ಸಂವಿಧಾನದಲ್ಲಿ ಹಸ್ತಕ್ಷೇಪ ಮಾಡುವ ಪ್ರಯತ್ನಗಳನ್ನು ವಿರೋಧಿಸಬೇಕಿದೆ. ಆ ಮೂಲಕ ಅಂಬೇಡ್ಕರ್ ಅವರು ಕಂಡ ಅಖಂಡ ಸಮುದಾಯದ ಸರ್ವೋದಯದ ಕನಸನ್ನು ನನಸು ಮಾಡಬೇಕಿದೆ. 'ಮಾನವಕುಲಂ ತಾನೊಂದೆವಲಂ' ಎನ್ನುವ ಪಂಪ ಮಹಾಕವಿಯ ಮಾತನ್ನು ಸಾರ್ಥಕಗೊಳಿಸಬೇಕಾಗಿದೆ.

**◆ ತಾವು ಒಬ್ಬ ದಲಿತ ಚಿಂತಕ, ಲೇಖಕರಾಗಿ ಭಾರತದ ಸಾಂಸ್ಕೃತಿಕ ಹಾಗೂ ರಾಜಕೀಯ ವಿದ್ಯಾಮಾನಗಳನ್ನು ಹೇಗೆ ವಿಶ್ಲೇಷಿಸುವಿರಿ?**

ಸಾಂಸ್ಕೃತಿಕ ಬದುಕಿನೊಂದಿಗೆ ಹಾಗೂ ರಾಜಕೀಯ ವಿದ್ಯಮಾನಗಳೊಂದಿಗೆ ಬರಹಗಾರ ಒಂದು ಬಗೆಯ ಸಾವಯವ ಸಂಬಂಧವನ್ನು ಹೊಂದಿರುತ್ತಾನೆ. ಅಲ್ಲಿ ಘಟಿಸುವ ಪಲ್ಲಟಗಳು ಅವನ ಚಿಂತನೆಗಳಿಗೆ ತಟ್ಟಿ ಆತನನ್ನು ಮತ್ತಷ್ಟು ಜಾಗೃತನನ್ನಾಗಿಸುತ್ತವೆ. ಸಾಂಸ್ಕೃತಿಕ ಕಾಳಜಿಯುಳ್ಳ ಬರಹಗಾರನು ತಕ್ಷಣಕ್ಕೆ ಅದಕ್ಕೆ ತನ್ನದೇ ಆದ ಶೈಲಿಯಲ್ಲಿ ಪ್ರತಿಕ್ರಿಯಿಸುತ್ತಾನೆ. ಈ ಪ್ರತಿಕ್ರಿಯೆ ತುಂಬಾ ಅಗತ್ಯ. ಕನ್ನಡದ ಸಂದರ್ಭದಲ್ಲಿ ಇದಕ್ಕೆ ಒಳ್ಳೆಯ ನಿದರ್ಶನಗಳೆಂದರೆ ಲಂಕೇಶ್, ಅನಂತಮೂರ್ತಿ ಮತ್ತು ದೇವನೂರ ಮಹಾದೇವ. ಈ